ಇಪಿ ನಂಃ **2/2024**
ಡಿ.ಡಬ್ಲ್ಯೂಃ **1**

ದಿನಾಂಕ **19-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಜಿ.ಎಸ್.ಎನ್ ವಕೀಲರಿಂದಃ</u>

ನನ್ನ ಹಾಗೂ ವಾದಿಯ ತಾಯಿಯಂದಿರು ಸ್ವಂತ ಅಕ್ಕ-ತಂಗಿಯರಾಗಿರುತ್ತಾರೆ. ವಾದಿಯ ಮನೆಗೆ ಹೊಂದಿಕೊಂಡು ನಮ್ಮ ಮನೆ ಇದೆ ಎಂದರೆ ಸರಿ. ನಮ್ಮ ಮನೆ ಹಳೆಯದಾಗಿದ್ದರಿಂದ ಅದನ್ನು ಕೆಡವಿ (ಬೀಳಿಸಿ) ಹೊಸ ಮನೆ ಕಟ್ಟಿದ್ದೇವೆ ಎಂದರೆ ಸರಿ. ನೀವು ಮನೆ ಕಟ್ಟಲು ಪ್ರಾರಂಬಿಸಿದಾಗ ವಾದಿ ಅಸಲು ದಾವೆ ದಾಖಲಿಸಿದ್ದರು ಎಂದರೆ ಸಾಕ್ಷಿ ನಮ್ಮ ಮನೆ ಕಟ್ಟಡ ಕಾಮಗಾರಿ ಮುಗಿದ ನಂತರ ದಾವೆ ದಾಖಲಿಸಿದ್ದರು ಎಂದು ನುಡಿಯುತ್ತಾರೆ. ನಾವು 2020 ರಲ್ಲಿ ಮನೆ ಕಟ್ಟಡ ಕಾಮಗಾರಿ ಪ್ರಾರಂಭ ಮಾಡಿದ್ದೆವು ಎಂದರೆ ಸರಿ. ವಾದಿ 2020 ರಲ್ಲಿಯೇ ದಾವೆ ದಾಖಲು ಮಾಡಿದ್ದರು ಎಂದರೆ ಸರಿ. ನಾವು ವಾದಿಯ ಜಾಗದಲ್ಲಿ ಒತ್ತುವರಿ ಮಾಡಿ ನಮ್ಮ ಮನೆ ಗೋಡೆ ಕಟ್ಟಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನೀವು ಒತ್ತುವರಿ ಮಾಡಿದ್ದರಿಂದ ವಾದಿ ದಾವೆ ದಾಖಲಿಸಿದ್ದರು ಎಂದರೆ ಸಾಕ್ಷಿ ಮನೆ ಕಟ್ಟಡ ಮುಗಿದ ನಂತರ ದಾಖಲಿಸಿದ್ದರು ಎಂದು ನುಡಿಯುತ್ತಾರೆ. ನಾವು ಒಂದು ವರ್ಷದ ಅವದಿಯಲ್ಲಿ ಮನೆ ಕಟ್ಟಡ ಪೂರ್ಣಗೊಳಿಸಿದ್ದೆವು. ಯಾವ ವರ್ಷದಲ್ಲಿ ನಿಮ್ಮ ಮನೆ ಕಟ್ಟಡ ಪೂರ್ಣಗೊಂಡಿರುತ್ತದೆ ಎಂದರೆ ಸಾಕ್ಷಿ ಕಟ್ಟಡ ಪೂರ್ಣಗೊಂಡು ಈಗ 05 ವರ್ಷ ಆಗಿದೆ ಎಂದು ನುಡಿಯುತ್ತಾರೆ. ಕಟ್ಟಡ ಪೂರ್ಣಗೊಳಿಸಿದ ನಿಖರ ದಿನಾಂಕ ಹಾಗೂ ತಿಂಗಳು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

2. ದಾವೆ ದಾಖಲಾದ ನಂತರ ನಿಮಗೆ ಸಮನ್ಸ್ ಬಂದಿತ್ತು ಎಂದರೆ ಸಾಕ್ಷಿ ಮನೆ ಕಟ್ಟಡ ಮುಗಿದ ನಂತರ ಸಮನ್ಸ್ ಬಂದಿತ್ತು ಎಂದು ನುಡಿಯುತ್ತಾರೆ. ಸಮನ್ಸ್ ಬಂದ ನಂತರ ವಕೀಲರ ಮೂಲಕ ನ್ಯಾಯಾಲಯದ ಮುಂದ ಹಾಜರಾಗಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ತಮ್ಮಂದಿರನ್ನು ಕರೆಸಿ ತೋರಿಸಿದಾಗ ವಾದಿಯ ಆಸ್ತಿಯಲ್ಲಿ ಒತ್ತುವರಿ ಆಗಿಲ್ಲ ಎಂದು ತಿಳಿಸಿದ್ದರು ಹಾಗೂ ಆಗ ನಾನು ಸಾವಿಗೆ ಹೋಗಿದ್ದರಿಂದ ಹಾಜರಾಗಿಲ್ಲ ಎಂದು ನುಡಿಯುತ್ತಾರೆ. ನಂತರ ದಾವೆಯಲ್ಲಿ ನಿಮ್ಮ ವಿರುದ್ಧ ಆದೇಶವಾಗಿರುತ್ತದೆ ಎಂದರೆ ಸಾಕ್ಷಿ ಆಗಿದೆ ಎಂದು ನುಡಿಯುತ್ತಾರೆ. ನಾವು ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ತೀರ್ಪು ಆದ ನಂತರ ನಾವು ಕಟ್ಟಡ ಪೂರ್ಣಗೊಳಿಸಿದ್ದೇವೆ

ಎಂದರೆ ಸರಿಯಲ್ಲ. ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿ ನಾವು ವಾದಿಯ ಆಸ್ತಿಯನ್ನು ಒತ್ತುವರಿ ಮಾಡಿ ಮನೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ. ಕಟ್ಟಡ ತೆರವುಗೊಳಿಸಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವೆಯಲ್ಲಿ ತೀರ್ಪು ಆದ ನಂತರ ಮನೆ ಕಟ್ಟಿದ್ದರೂ ಸಹ ನಾನು ಉದ್ದೇಶ ಪೂರ್ವಕವಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ವಯಸ್ಸಾಗಿದ್ದು ಆತ ಊರಿನಲ್ಲಿ ವಾಸವಾಗಿರುವುದಿಲ್ಲ ಎಂದು ಆತನ ಆಸ್ತಿ ಕಬಳಿಸುವ ಉದ್ದೇಶ ಹೊಂದಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ